ಭಾಸ್ಕರಂ, ಪ್ರೇಮಾಯತನದಲ್ಲಿ ಆಯುರ್ವೇದ ಕಲಿತು ತಮಿಳುನಾಡಿನ ಹಳ್ಳಿಗಳಲ್ಲಿ ಕೆಲಸ ಮಾಡಿದರು. ತಾರಾನಾಥರು ತೀರಿಕೊಂಡ ಬಳಿಕ, ಅವರ ಮಗ ಡಾ. ರಣಬೀರ ಅವರು, ಸರ್ಕಾರಿ ಆಸ್ಪತ್ರೆಗೆ ರಾಜೀನಾಮೆ ಸಲ್ಲಿಸಿ, ಪ್ರೇಮಾಯತನಕ್ಕೆ ಬಂದರು. ತಂದೆಯ ಪ್ರಯೋಗಶೀಲತೆಯನ್ನು ಮುಂದುವರೆಸಿದರು. ರಣಬೀರ ಅವರು ಅಕಾಲಿಕವಾಗಿ ನಿಧನರಾದ ಬಳಿಕ, ಅವರ ಮಗ ಅನೀಶ್, ಪ್ರೇಮಾಯತನವನ್ನು ಮುನ್ನಡೆಸುತ್ತಿದ್ದಾರೆ.

ನಾನು ಮತ್ತು ಬಾನು ಪ್ರೇಮಾಯತನಕ್ಕೆ ಹೋದಾಗ, ಸಂಜೆಯಾಗುತ್ತಿತ್ತು. ಎತ್ತರದ ಮರಗಳ ನಡುವೆ ಪ್ರೇಮಾಯತನದ ಹೊಸಕಟ್ಟಡವೂ ಹಳೆಯ ಶೆಡ್ಡುಗಳೂ ಇದ್ದವು. ವೈದ್ಯರು ಮತ್ತು ಶುಶ್ರೂಷಕರು ರೋಗಿಗಳನ್ನು ಉಪಚರಿಸುತ್ತಿದ್ದರು. ಮರಗಳ ನೆರಳಿನಲ್ಲಿ ತಾರಾನಾಥರ ಅಸ್ಥಿಯನ್ನಿಟ್ಟಿರುವ ಸ್ಮಾರಕ ಸಮಾಧಿಯಿತ್ತು. ಪಕ್ಕದಲ್ಲೇ ಪುತ್ರ ರಣಬೀರರ ಸಮಾಧಿ. ನಮಗೆ ಸೂಫಿಸಂತರ ದರ್ಗಾಕ್ಕೆ ಹೋದಂತಾಯಿತು. ಅಲ್ಲಿ ಮೌನವಾಗಿ ಕುಳಿತು ತುಸುಹೊತ್ತು ಧ್ಯಾನ ಮಾಡಿದೆವು. ನಿರ್ಜನವಾದ ಪ್ರದೇಶದಲ್ಲಿ, ಕಳ್ಳರ ಕಾಟವಿದ್ದ ಜಾಗದಲ್ಲಿ ನೆಲೆನಿಂತು, ಆಶ್ರಮಕಟ್ಟಿ, ಇಡೀ ದೇಶದ ನಾನಾ ಭಾಗದ ಕುತೂಹಲಿಗಳನ್ನು ಅಭ್ಯಾಸಿಗಳನ್ನು ಸೆಳೆದು, ಸುತ್ತಲ ಜನರಿಗೆ ನೆರವಾದ ತಾರಾನಾಥರ ಪ್ರೇಮಮಯ ವ್ಯಕ್ತಿತ್ವವನ್ನು ನೆನೆಯುತ್ತ ಪ್ರಾರ್ಥನೆ ಸಲ್ಲಿಸಿದೆವು. ಪ್ರೇಮಾಯತನದ ಹೊಸಕಟ್ಟಡದಲ್ಲಿದ್ದ ತಾರಾನಾಥರ ದೂರದ ಸಂಬಂಧಿಯೊಬ್ಬರು ಚಹಕೊಟ್ಟು ಉಪಚರಿಸಿದರು. ಗೋಡೆಗಳ ಮೇಲೆ 'ಭಿಷಗ್ಗಾಚಾರ್ಯ ಪಂ. ತಾರಾನಾಥರು' ಎಂಬ ಅಡಿಬರೆಹವುಳ್ಳ ತಾರಾನಾಥರ ಪಟವಿತ್ತು. ಅವರ ಪುಸ್ತಕ ಸಂಗ್ರಹವನ್ನು ನೋಡಿದೆವು.

ಸಾಬರಮತಿ ಆಶ್ರಮದಂತೆ ಪ್ರೇಮಾಯತನವೂ ಹೊಳದಂಡೆಯಲ್ಲಿದೆ. ಇಲ್ಲಿಂದ ಅನತಿ ದೂರದಲ್ಲಿ ತುಂಗಭದ್ರೆ ಹರಿಯುವಳು. ಎಲ್ಲೊ ದೂರದ ಮಲೆನಾಡಿನಲ್ಲಿ ಹುಟ್ಟಿದ ಎರಡು ಹೊಳೆಗಳು, ನೂರಾರು ಪುಟ್ಟಧಾರೆಗಳನ್ನು ಸಂಗಮಿಸಿಕೊಂಡು ಹರಿಯುತ್ತ, ಬಾಯಾರಿದ ಬಯಲಸೀಮೆಯನ್ನು ತಣಿಸಿ ದೂರದ ಬಂಗಾಳ ಸಮುದ್ರವನ್ನು ಕೂಡುತ್ತವೆ. ಕಡಲ ಪಟ್ಟಣವಾದ ಮಂಗಳೂರಿನಲ್ಲಿ ಹುಟ್ಟಿದ ತಾರಾನಾಥರು, ಹೈದರಾಬಾದಿನಲ್ಲಿ ಬೆಳೆದು, ಬೀದರ ರಾಯಚೂರುಗಳಲ್ಲಿ ದುಡಿದು, ತುಂಗಭದ್ರಾದಲ್ಲಿ ನೆಲೆನಿಂತು, ಲೋಕಹಿತಕ್ಕಾಗಿ ತಮ್ಮನ್ನು ತೆತ್ತುಕೊಂಡು ಬೆಂಗಳೂರಿನಲ್ಲಿ ದೇಹಬಿಟ್ಟರು. ಪ್ರೇಮಾಯತನದಲ್ಲಿ ನಿಂತರೆ ಹೊಳೆ ಕಾಣುವುದಿಲ್ಲ. ಆದರೆ, ಅದರ ನಿರಂತರ ಹರಿವಿನ ಸಪ್ಪಳ ಕೇಳಿಸುತ್ತದೆ. ತಾರಾನಾಥರು ಭೌತಿಕವಾಗಿ ಇಲ್ಲವಾಗಿದ್ದಾರೆ. ಆದರೆ, ಪ್ರೇಮಾಯತನದ ಪ್ರಯೋಗದ ಫಲಗಳು ನಾಡಿನ ಬದುಕಿನಲ್ಲಿ ಯಾವೆಲ್ಲ ರೂಪಾಂತರಗಳಲ್ಲಿ ಪ್ರವಹಿಸುತ್ತಿವೆಯೊ?


### ರಹಮತ್ ತರೀಕೆರೆ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕ ನಾಥಪಂಥ', 'ಕರ್ನಾಟಕದ ಸೂಫಿಗಳು', 'ಕರ್ನಾಟಕ ಗುರುಪಂಥ', 'ಹಾಸು ಹೊಕ್ಕು' ಅವರ ಪ್ರಮುಖ ಪುಸ್ತಕಗಳು. ಅವರ ಲಲಿತ ಪ್ರಬಂಧಗಳ ಸಂಕಲನ 'ಹಿತ್ತಲ ಜಗತ್ತು'.